


ತಿಂಗಳುಗಳ ನಂತರ, 2005ರಲ್ಲಿ. ಕಳೆದ ಆಗಸ್ಟ್ 10ರಂದು ಪ್ರಗ್ನುವಿಗೆ ಹದಿನೆಂಟು ತುಂಬಿದೆ. ಐದು ಬಾರಿಯ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೆ ಹತ್ತೊಂಬತ್ತು ವಸಂತಗಳ ಸಂಭ್ರಮ. ನಾರ್ವೆಯ ಮಾಸ್ಟರ್‌ನ ಜಿಎಂ ಪಟ್ಟಕ್ಕಿಂತಲೂ ಕಿರಿಯನಾದ ಪ್ರಗ್ನು, ಈಗ ವಿಶ್ವದ ನಂಬರ್ ಒನ್ ಆಟಗಾರನಿಗೆ ಸವಾಲೆಸೆಯುವ ಎತ್ತರಕ್ಕೆ ಬೆಳೆದಿರುವುದು ಕಡಿಮೆ ಸಾಧನೆಯಲ್ಲ. 2007ರಲ್ಲಿ ವಿಶ್ವ ಚೆಸ್ ಚಾಂಪಿಯನ್ ಕಿರೀಟ ಧರಿಸಿದಾಗ ವಿಶ್ವನಾಥನ್ ಆನಂದ್ ಅವರ ವಯಸ್ಸು 38. ಪ್ರಗ್ನುವಿಗೀಗ 18. ಮುಂದಿನ 20 ವರ್ಷಗಳಲ್ಲಿ ಈ ಚೋಟಾ ಚಾಂಪಿಯನ್ ಏನೆಲ್ಲ ಸಾಧನೆ ಮಾಡಬಹುದು?

ಇತ್ತೀಚಿನ ವರ್ಷಗಳಲ್ಲಿ ಚೆಸ್ ಜಗತ್ತು ಇಷ್ಟು ರೋಚಕ ಸಮ್ಮೋಹಕ ಕ್ಷಣಗಳನ್ನು ಕಂಡಿರಲಿಲ್ಲ. ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳ ನೇರಪ್ರಸಾರದ ನಡೆಗಳನ್ನು ಬಿತ್ತರಿಸುತ್ತಿದ್ದ ಯ್ಯೂಟ್ಯೂಬ್ ಚಾನೆಲ್ ಅಂಗಳ ಕ್ರಿಕೆಟ್‌ನ ಅಮೃತಕ್ಷಣಗಳನ್ನು ಸಾಕ್ಷಾತ್ಕರಿಸಿಕೊಂಡಿರುವ ಲಾರ್ಡ್ಸ್ ಅಥವಾ ವಾಂಖೆಡೆ ಕ್ರೀಡಾಂಗಣದ ಸ್ವರೂಪ ತಳೆದಿದ್ದವು. ಕಾರ್ಲ್‌ಸನ್ ವರ್ಸಸ್ ಪ್ರಜ್ಞಾನಂದ ಎನ್ನುವ ಸಮೀಕರಣ ಕೆಲವರಿಗೆ ಕಳೆದ ಫುಟ್‌ಬಾಲ್ ವಿಶ್ವಕಪ್ ಫೈನಲ್‌ನಲ್ಲಿನ ಮೆಸ್ಸಿ ವರ್ಸಸ್ ಎಂಬಾಪೆ ಜಿದ್ದಾಜಿದ್ದಿಯನ್ನು ನೆನಪಿಸಿತು. ಚದುರಂಗದ ಮಣೆಯಲ್ಲಿನ ಈ ಸಂಭ್ರಮದ ಹೊನಲಿನ ಕೇಂದ್ರದಲ್ಲಿದ್ದುದು ಪ್ರಜ್ಞಾನಂದನಲ್ಲದೆ ಬೇರಾರೂ ಅಲ್ಲ.



ಸಾಧಕ ಮಗನಿಗೆ ಅಮ್ಮನ ಸಿಹಿಮುತ್ತು

## ನಿನ್ನಂಥ ಅಮ್ಮ ಇಲ್ಲ

ಫಿಡೆ ವಿಶ್ವಕಪ್ ಪಂದ್ಯಾವಳಿಯಲ್ಲಿ ಪ್ರಜ್ಞಾನಂದನ ಗೆಲುವಿನ ಹೊಳಪಿನಷ್ಟೇ ಪ್ರಖರವಾಗಿದ್ದುದು, ಚೋಟಾ ಚಾಂಪಿಯನ್ ಅಮ್ಮನ ಕಂಗಳ ಬೆಳಕು. ಮಗನ ಸಾಧನೆಯ ಕಂಡು ಅಮ್ಮನ ಮೊಗದಲ್ಲಿನ ಮಂದಹಾಸ ಹಾಗೂ ಆರ್ದ್ರ ಕಣ್ಣುಗಳಲ್ಲಿನ ಹೊಳಪು ಕ್ರೀಡಾರಸಿಕರಿಗೆ ಆಟದ ಪಟದಾಚೆ ಕಾಣಿಸಿದ ಅಪೂರ್ವ ಕ್ಷಣಗಳು. ಅರ್ಜುನ್ ಎದುರು ಗೆದ್ದಾಗ ಪ್ರಗ್ನು ತಾಯಿ ನಾಗಲಕ್ಷ್ಮಿಯವರ ಮುಖದಲ್ಲಿ ಚೆಲ್ಲುವರಿದ ಬೆಳುದಿಂಗಳನ್ನು ಸುಲಭಕ್ಕೆ ಮರೆಯಲಾದೀತೆ?

ಪ್ರಗ್ ತಂದೆ ರಮೇಶ್‌ಬಾಬು ಬ್ಯಾಂಕ್ ಉದ್ಯೋಗಿ. ಅಮ್ಮ ನಾಗಲಕ್ಷ್ಮಿ ಗೃಹಿಣಿ. ಪ್ರಜ್ಞಾನಂದನ ಬಹುದೊಡ್ಡ ಶಕ್ತಿ ಅವನ ಅಮ್ಮ. ಈ ಮಾತನ್ನು ಪ್ರಗ್ನುವಿನ ಅಪ್ಪ ರಮೇಶ್‌ಬಾಬು ಕೂಡ ಒಪ್ಪುತ್ತಾರೆ; ಮಗನನ್ನು ನೆರಳಿನಂತೆ ಕಾಯುವ, ಹಿಂಬಾಲಿಸುವ ನಾಗಲಕ್ಷ್ಮಿಗೆ ಪ್ರಗ್ನುವಿನ ಯಶಸ್ಸಿನಲ್ಲಿ ಪಾಲು ಸಲ್ಲಬೇಕು ಎನ್ನುತ್ತಾರೆ. ದೇಸಿ ಟೂರ್ನಿಗಳಿರಲಿ, ಅಂತರರಾಷ್ಟ್ರೀಯ ಟೂರ್ನಿಗಳಿರಲಿ, ಮಗನಿಗೆ ಅಮ್ಮನದೇ ಬೆಂಗಾವಲು. ಅಮ್ಮ–ಮಗನ ಲಗ್ಗೇಜಿನಲ್ಲಿ ಕುಕ್ಕರ್‌ಗೂ ದಿನಸಿಗೂ ಸ್ಥಳವುಂಟು. ವಿದೇಶಕ್ಕೆ ಹೋದರೂ ಅಮ್ಮನ ಅನ್ನ–ರಸಂ ಪ್ರಗ್ನುವಿಗೆ ತಪ್ಪುವುದಿಲ್ಲ.